38

ಇಲಾಖೆ / ವಿಷಯ : DEPARTMENT / SUBJECT: ಸಂಸತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 26/3/2021

# ಸಂಸತ್ ಕಲಾಪ ಮುಂದೂಡಿಕೆ

**ನವದೆಹಲಿ:** ಎರಡೂವರೆ ತಿಂಗಳಿನಿಂದ ನಡೆಯುತ್ತಿದ್ದ ಸಂಸತ್ ಬಜೆಟ್
ಅಧಿವೇಶನ ಗುರುವಾರ ಮುಕ್ತಾಯವಾಗಿದ್ದು ಸಂಸತ್ ಅಧಿವೇಶನವು
ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟಿದೆ. ಈ ಬಾರಿಯ ಕಲಾಪವು ಶೇ. 114ರಷ್ಟು
ಫಲದಾಯಕವಾಗಿತ್ತು ಎಂದು ಸರ್ಕಾರ ತಿಳಿಸಿದೆ. ಕಲಾಪದಲ್ಲಿ 18 ವಿಧೇಯಕ
ಗಳನ್ನು 2 ಸದನಗಳಲ್ಲಿ ಅಂಗೀಕರಿಸಲಾಗಿದೆ. ಜ. 29ರಿಂದ ಶುರುವಾಗಿದ್ದ ಅಧಿ
ವೇಶನ ಏ. 8ರಂದು ಅಧಿಕೃತವಾಗಿ ಮುಕ್ತಾಯವಾಗಬೇಕಿತ್ತು. ಐದು ರಾಜ್ಯಗಳಲ್ಲಿನ
ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

**ಸ್ಪೀಕರ್ ಧನ್ಯವಾದ:** ಕೊರೊನಾ ಸೋಂಕಿಗೆ ತುತ್ತಾಗಿರುವ ಸ್ಪೀಕರ್ ಓಂ ಬಿರ್ಲಾ,
ಕಲಾಪದ ಕಡೆಯ ದಿನಗಳಿಗೆ ಹಾಜರಾಗಲಿಲ್ಲ. ಕಲಾಪಗಳನ್ನು ಸುಗಮವಾಗಿ
ನಡೆಸಿದ್ದಕ್ಕಾಗಿ ಬಿರ್ಲಾ ಅವರು ಸಮಿತಿಯ ಸದಸ್ಯರಿಗೆ ಧನ್ಯವಾದ ಅರ್ಪಿಸಿದ್ದಾರೆ.

**ಗದ್ದಲದ ನಡುವೆಯೂ ಚರ್ಚೆ:** ಲೋಕಸಭೆಯಲ್ಲಿ ಫೆ. 1ರಂದು ಕೇಂದ್ರ
ಸರ್ಕಾರ ತನ್ನ ಬಜೆಟ್ ಮಂಡಿಸಿತ್ತು. ರೈತರ ಪ್ರತಿಭಟನೆ ಕುರಿತಾಗಿ ವಿಪಕ್ಷಗಳು
ನಡೆಸಿದ ಗದ್ದಲ ನಡೆಸಿದ ಕಾರಣ ಮೂರು ದಿನ ಕಲಾಪ ನಡೆಯಲಿಲ್ಲ. ಮಾ.
8ರಿಂದ ಮತ್ತೊಂದು ಸುತ್ತಿನ ಬಜೆಟ್ ಅಧಿವೇಶನ ಆರಂಭವಾಯಿತು. ಈ ಬಾರಿ
ಕಲಾಪವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿತ್ತು. ಮೊದಲಾರ್ಧದಲ್ಲಿ
ವಿವಿಧ ಇಲಾಖೆಗಳ ಆರ್ಥಿಕ ಬೇಡಿಕೆಯ ವಿಶ್ಲೇಷಣೆಗಾಗಿ ನೇಮಿಸಲಾಗಿದ್ದ
ಸ್ಥಾಯಿ ಸಮಿತಿಗಳ ವರದಿಯ ಚರ್ಚೆಗಳು ನಡೆದವು. ದ್ವಿತೀಯಾರ್ಧದಲ್ಲಿ
2021–22ರ ಆರ್ಥಿಕ ಮಸೂದೆಯ ಬಗ್ಗೆ ಚರ್ಚೆಗಳನ್ನು ನಡೆಸಲಾಯಿತು.